ಅಧ್ಯಕ್ಷರು : ಅದನ್ನು ಮಂತ್ರಿಗಳು ಹೇಳಬೇಕು, ನಾಳೆ ಕೊಡುತ್ತೇವೆ ಎಂದು ನಾನು ಹೇಳುವುದಕ್ಕಾಗುತ್ತದೆಯೇ?

ಶ್ರೀ ಬಿ. ಆರ್. ನೀಲಕಂಠಪ್ಪ : ನಾಳೆ ಮತ್ತೆ ನಾನು ಇದನ್ನು ರೈಸ್ ಮಾಡುತ್ತೇನೆ.

ಅಧ್ಯಕ್ಷರು : ಮಾಡಿ, ಉತ್ತರ ಬಂದರೆ ಅಜೆಂಡಾದಲ್ಲಿ ತಾಕುತ್ತೇವೆ.

ಶ್ರೀ ಬಿ. ಆರ್. ನೀಲಕಂಠಪ್ಪ : ಇವತ್ತು 2 ಆನೆಗಳು ಸತ್ತಿವೆ, ಚಿರತೆಗಳು ಸಾಯುತ್ತಿವೆ ಇದು ದೊಡ್ಡ ಹಗರಣವಾಗುತ್ತಿದೆ. ಇದರಲ್ಲಿ ವೀರಪ್ಪನ್ ಗಿಂತಲೂ ಹೆಚ್ಚಾಗಿ ಅಧಿಕಾರಿಗಳು ಶಾಮೀಲಾಗಿದ್ದಾರೆ. ಇದು ಸೂಕ್ಷ್ಮವಾದ ವಿಚಾರವಾಗಿರುವುದರಿಂದ ದಯಮಾಡಿ ನಾಳೆ ಉತ್ತರ ಕೊಡಬೇಕು. ನಾಳೆ ಉತ್ತರ ಕೊಡುತ್ತೇನೆ ಎಂದು ಮಾನ್ಯ ಅರಣ್ಯ ಸಚಿವರು ಹೇಳಿದ್ದಾರೆ. ಅವರು ನಾಳೆ ಉತ್ತರ ಕೊಡಲು ತಾವು ಅವಕಾಶ ಮಾಡಿಕೊಡಬೇಕು.

(ಊ) ರಾಜ್ಯದಲ್ಲಿ ಮರುಪಾವತಿ.

+ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸಾಲ ಮರುಪಾವತಿ ಮಾಡುವಂಥ ಜನಗಳ ಸಂಖ್ಯೆ ಕಡಿಮೆ ಇದೆ ಎನ್ನುವುದು ಸಮಗೆಲ್ಲ ಗೊತ್ತಿದೆ. ಕೆ.ಎಸ್. ಎಫ್. ಸಿ. ಯಲ್ಲಿ ಒಂದು ವಿಶೇಷ ರೂಲ್ ಇದೆ. ಒಮ್ಮೆ ಸಾಲ ಪಡೆದುಕೊಂಡಂಥವನು ಬಡ್ಡಿ ಸಮೇತ ಸಾಲವನ್ನು ಮರುಪಾವತಿ ಮಾಡುತ್ತೇನೆ ಎಂದು ಹೋದರೂ ಕೂಡ ಅವಧಿ ಮುಂಚಿತವಾಗಿ ಸಾಲವನ್ನು ಮರುಪಾವತಿ ಮಾಡುವ ಹಾಗಿಲ್ಲ, ನೀನು ಕೊಟ್ಟ ದಾಖಲೆಗಳನ್ನು ಅವಧಿಗೆ ಮುಂಚೆ ಪಾಪಸ್ಸು ಕೊಡುವ ಹಾಗಿಲ್ಲ ಎಂದು ಹೇಳುವುದು ವಿಶೇಷ ಸಂಗತಿಯಾಗಿದೆ. ಇದರಿಂದಾಗಿ ಸಾಲವನ್ನು ಪೂರ್ಣವಾಗಿ ಬಡ್ಡಿ ಸಮೇತ ಮರುಪಾವತಿ ಮಾಡುತ್ತೇವೆ ಎನ್ನುವವರಿಗೆ ತೊಂದರೆಯಾಗುತ್ತಿದೆ. ದಯವಿಟ್ಟು ಈ ರೂಲ್ ಅನ್ನು ಅಮೆಂಡ್ ಮಾಡಿದರೆ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಈಗಾಗಲೇ ಪೂರ್ತಿ ಸಾಲ ಮರುಪಾವತಿ ಮಾಡಿದವರಿಗೆ ಅವರ ದಾಖಲೆಗಳು ಸಿಗದೇ ತೊಂದರೆಯಾಗಿದೆ. "Borrower will not be at liberty to pay the outstanding principal sum in full or part before th due date or the dates prescribed for payment in these presents except with the approval in writing of the Corporation and subject to such terms and conditions as stipulated by the Corporation in this behalf." ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ, ಜನಗಳಿಗೆ ಬೇರೆ ಕಡೆಯಿಂದ ದುಡ್ಡು ಬಂದಾಗ ಸಾಲವನ್ನು ಬಡ್ಡಿಸಮೇತ ಮರುಪಾವತಿ ಮಾಡಬೇಕು ಎಂದು ಹೊರಟಾಗ ಅವರ ದಾಖಲೆಗಳು ಸಿಗುತ್ತಿಲ್ಲ. ಆ ದಾಖಲೆ ಪತ್ರಗಳನ್ನು ಕೊಟ್ಟು ನೀವು ನಮ್ಮ ಸಾಲಗಾರರಲ್ಲ ಎಂದು ಹೇಳುವಂಥಾದ್ದು ಅವಶ್ಯಕವಾಗಿದೆ. ಅವರು ಸಾಲ ಮರುಪಾವತಿ ಮಾಡಿದರೂ ಕೂಡ 3-4 ವರ್ಷ ಕೆ.ಎಸ್. ಎಫ್. ಸಿ. ಯಲ್ಲಿ ಸಾಲಗಾರರಾಗಿಯೇ ಮುಂದುವರಿಯುವಂಥಾದ್ದು ಅವರ ದಾಖಲೆಗಳು ಅಲ್ಲೇ ಉಳಿಯುವಂಥಾದ್ದು ಸಮರ್ಪಕವಲ್ಲ. ಸರ್ಕಾರ ದಯವಿಟ್ಟು ಈ ಬಗ್ಗೆ ಆಲೋಚನೆ ಮಾಡಬೇಕು. ಅದರಿಂದ ಅಲ್ಲಿ ಸಾಲ ಪಡೆದುಕೊಂಡಂಥ ಜನರಿಗೆ ತಾವು ಸಾಲಗಾರರಲ್ಲ ಎಂದು ಮಾಡಲು ಆಗುತ್ತದೆ ಮತ್ತು ಕೆ.ಎಸ್. ಎಫ್. ಸಿ. ಗೆ ಕೂಡ ತಕ್ಷಣ ದುಡ್ಡನ್ನು ತುಂಬಿಕೊಳ್ಳಲು ಸಾಧ್ಯವಾಗುತ್ತದೆ. ಈ ಕೆಲಸವನ್ನು ಸರ್ಕಾರ ಮಾಡಬೇಕು ಎನ್ನುವ ವಿನಂತಿಯನ್ನು ನಾನು ತಮ್ಮ ಮೂಲಕ ಮಾಡುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಇವರು ನಿಬಂಧನೆಗಳಿಗೆ ಒಪ್ಪುವೇ ಸಾಲ ತೆಗೆದುಕೊಂಡಿರುತ್ತಾರೆ. ಸಾಲ ತೆಗೆದುಕೊಂಡಾದ ಮೇಲೆ ಅವರು ಹಾಕುವ ಬಡ್ಡಿಯನ್ನು ನೋಡಿ, ಇವರ ಕೈಯಿಂದ ಬಿಡಿಸಿಕೊಂಡರೆ ಸಾಕು ಎನ್ನುವ ಸ್ಥಿತಿ ಇದೆ. ಇದು ರಿಡೆಂಟಿಂಟ್ ಆಗಿದೆ. ಇದನ್ನು ಸೆಟ್‌ರೈಟ್ ಮಾಡಲು ನಾನು ಪ್ರಯತ್ನಿಸುತ್ತೇನೆ.

(ಎ) ಆಟೋರಿಕ್ಷಾಗಳಿಗೆ ನಿರ್ದಿಷ್ಟಪಡಿಸಿದಂಥ ದರ ನಿಗಧಿ.

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ನಾನು ಕೇಳುತ್ತಿರತಕ್ಕಂಥ ಪ್ರಶ್ನೆ ಪೋಲೀಸರಿಗೆ ಸಂಬಂಧಪಟ್ಟಿದ್ದು ಬೆಂಗಳೂರು ನಗರದಲ್ಲಿ ಸಾರಿಗೆ ಇಲಾಖೆ ಮತ್ತು ಪೋಲೀಸ್ ಇಲಾಖೆಯವರು ಆಟೋರಿಕ್ಷಾದವರ ಜೊತೆ ಚರ್ಚೆ ಮಾಡಿ ಒಂದು ನಿರ್ದಿಷ್ಟಪಡಿಸಿದಂಥ ದರವನ್ನು ನಿಗಧಿ ಮಾಡಿದ್ದಾರೆ. ಮಹಾನಗರ ಪಾಲಿಕೆಯೊಳಗಡೆ ಓಡುವಂಥ ಆಟೋರಿಕ್ಷಾಗಳಿಗೆ ಎಷ್ಟು ಕಿ.ಮೀ.ಗೆ ಎಷ್ಟು ಹಣ ಯಾವ ಯಾವ ಪಾಯಿಂಟ್‌ಗೆ ಎಷ್ಟು ಹಣ ಎಂದು ನಿರ್ಧಾರ ಮಾಡಿದ್ದಾರೆ. ಅದರಂತೆ ನ್ಯಾಯಯುತವಾಗಿ ಮೀಟರ್‌ನ್ನು ಹಾಕಿ ಓಡಿಸುತ್ತಿದ್ದಾರೆ. ಆದರೆ ಕಳೆದ 2-3 ತಿಂಗಳಿಂದ, ಒಬ್ಬ ಪೋಲೀಸ್ ಅಧಿಕಾರಿಯ ಕಾರ್ಯತಂತ್ರದಿಂದ ಮಹಾನಗರಪಾಲಿಕೆಯ ಒಳಗಡೆ ಆಟೋರಿಕ್ಷಾಗಳಿಗೆ ಎರಡುರೀತಿಯ ಚಾರ್ಜ್‌ನ್ನು ವಸೂಲು ಮಾಡುತ್ತಿದ್ದಾರೆ. 2-3 ತಿಂಗಳಿಂದ ಸಾವಿರಾರು ಪ್ರಯಾಣಿಕರು ಗೋಳಾಡುತ್ತಿದ್ದಾರೆ. ಬೇರೆ ಕಡೆ ಆಟೋ ಹತ್ತುವುದಕ್ಕೂ, ರೈಲ್ವೆಸ್ಟೇಷನ್‌ನಲ್ಲಿ ಹತ್ತುವುದಕ್ಕೂ ಬಹಳ ವ್ಯತ್ಯಾಸವಿದೆ. ರೈಲ್ವೆಸ್ಟೇಷನ್‌ನಲ್ಲಿ ಆಟೋ ಹತ್ತಿದರೆ ಒಂದಕ್ಕೆ ಎರಡರಷ್ಟು ಚಾರ್ಜ್ ಕೊಡಬೇಕು. ಅಲ್ಲಿ ಪ್ರೀ-ಪೇಡ್ ಆಟೋರಿಕ್ಷಾ ನಿಲ್ದಾಣ ಎಂದು ಮಾಡಿದ್ದಾರೆ. ರೈಲ್ವೆ ಸ್ಟೇಷನ್‌ನಲ್ಲಿ ಇಳಿದ ತಕ್ಷಣ ಪ್ರಯಾಣಿಕರೆಲ್ಲರೂ ಅಲ್ಲಿಗೆ ಹೋಗಬೇಕು. ಇಲ್ಲದಿದ್ದರೆ ಪೋಲೀಸರು ಅವರನ್ನು ತಡೆದು ಅಲ್ಲಿಗೆ ಕಳುಹಿಸುತ್ತಾರೆ. ಪ್ರೀಪೇಡ್ ರಸೀತಿ ತೆಗೆದುಕೊಳ್ಳದಿದ್ದರೆ ಆಟೋ ಹತ್ತಲು ಬಿಡುವುದಿಲ್ಲ. ಈ ಬಗ್ಗೆ ನಾನು 2-3 ಸಲ ಮಾತನಾಡಿದ್ದೇನೆ. ಮಾನ್ಯ ಗೃಹ ಸಚಿವರಿಗೆ ಪತ್ರ ಬರೆದಿದ್ದೇನೆ, ಮಾನ್ಯ ಸಾರಿಗೆ ಸಚಿವರಿಗೆ ಪತ್ರ ಬರೆದಿದ್ದೇನೆ. ಪೋಲೀಸ್ ಅಧಿಕಾರಿಗಳಿಗೂ ಪತ್ರ ಬರೆದಿದ್ದೇನೆ, ಅವರಿಂದ ಉತ್ತರವೂ ಇಲ್ಲ ಮತ್ತು ದರದಲ್ಲಿ ವ್ಯತ್ಯಾಸವನ್ನೂ ಮಾಡಲಿಲ್ಲ. ರೈಲ್ವೆಸ್ಟೇಷನ್‌ನಿಂದ ಕಾಸಗರ ಭವನಕ್ಕೆ ಬಂದರೆ ಮೀಟರ್‌ನಲ್ಲಿ 10 ರೂಪಾಯಿ 80 ಪೈಸೆ ಚಾರ್ಜ್ ಆಗುತ್ತದೆ. ಆದರೆ ಕಳೆದ 3 ತಿಂಗಳಿಂದ ಪ್ರೀ-ಪೇಡ್ ಆಟೋರಿಕ್ಷಾಗಳಲ್ಲಿ 19 ರೂಪಾಯಿ ಮಾಡಿದ್ದಾರೆ. ಈ ವ್ಯತ್ಯಾಸವನ್ನು ನಾವು ಮನಗಾಣಬೇಕು. ನಾನು ಶಾಸಕನಾಗಿ ಇಷ್ಟು ಹಣವನ್ನು ಕೊಡುವಂತಹದ್ದು ದೊಡ್ಡ ವಿಚಾರವಲ್ಲ ಇದರ ಬಗ್ಗೆ ಸಾಕಷ್ಟು ತೊಂದರೆಯನ್ನು ಅನುಭವಿಸಿರುವ ಪತ್ರಕರ್ತರು ಸಹ ಹಲವಾರು ಸಲ ಪತ್ರಿಕೆಗಳಲ್ಲಿ ಲೇಖನವನ್ನು ಬರೆದಿದ್ದಾರೆ. ಆದರೂ ಇದರ ಬಗ್ಗೆ ಯಾರೂ ಸಹ ಗಮನ ಹರಿಸಲಿಲ್ಲ. ಇದರ ಬಗ್ಗೆ ವಿಚಾರ ಮಾಡಿದರೆ ಇದನ್ನು ಮಾಡಿದ್ದು ಶ್ರೀ ಸಾಂಗ್ಲಿಯಾನರವರು ಎಂದು ಹೇಳುತ್ತಾರೆ. ಈ ರೀತಿ ಒಂದಕ್ಕೆ ಎರಡರಷ್ಟು ಬೆಲೆಯನ್ನು ನಿಗಧಿ ಮಾಡಲು ಅವರಿಗೆ ಅಧಿಕಾರ ಕೊಟ್ಟವರು ಯಾರು ? ಅವರು ಬೇಕಾಬಿಟ್ಟಿಯಾಗಿ ಅಧಿಕಾರವನ್ನು ಚಲಾಯಿಸುವುದಾದರೆ ಇಲ್ಲಿ ಸರ್ಕಾರ ಏಕೆ ಇರಬೇಕು ? ದಯಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದರಿಂದಾಗಿ ಕಳೆದ ಎರಡು ಮೂರು ತಿಂಗಳಿನಲ್ಲಿ ಲಕ್ಷಗಟ್ಟಲೆ ಹಣವನ್ನು ಲೂಟಿ ಮಾಡಿದ್ದಾರೆ. ಬಡ ಜನರು ಕಣ್ಣೀರು ಹಾಕುತ್ತಾರೆ. ಕಾಪವನ್ನು ಹಾಕಿ ವಿಧಿ ಇಲ್ಲದೆ ಆಟೋರಿಕ್ಷಾದಲ್ಲಿ ಹತ್ತಿಕೊಂಡು ಹೋಗುತ್ತಾರೆ. ಇದರ ಬಗ್ಗೆ ದಯವಿಟ್ಟು ಸರ್ಕಾರ ಗಮನಹರಿಸಿ ತಕ್ಷಣವೇ ಪೋಲೀಸ್ ಇಲಾಖೆಯಿಂದ ಅದನ್ನು ತಪ್ಪಿಸಬೇಕು. ಮತ್ತು ಏಕರೀತಿಯ ಆಟೋರಿಕ್ಷಾ ದರವನ್ನು ನಿಗಧಿ ಮಾಡಬೇಕು ಎಂದು ನಾನು ಮಾನ್ಯ ಗೃಹ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.